


ಅಣ್ಣ ಅತ್ತಿಗೆಯರ ಹಂಗಿನಲ್ಲಿದ್ದೀಯಾ ಎಷ್ಟು ನಮ್ರನಾಗಿ, ಪ್ರಾಮಾಣಿಕನಾಗಿದ್ದಷ್ಟೂ ಒಳ್ಳೆಯದು' ಅಮ್ಮ ಹೇಳುತ್ತಿದ್ದ ಮಾತುಗಳು ಯಾವಾಗಲೂ ಅವನ ಮನಸ್ಸಿನಲ್ಲಿರುತ್ತವೆ. ಬೀರುವಿನಲ್ಲಿರುವ ದುಡ್ಡಿನ ಭೂತದಿಂದಾಗಿ ಮನಸ್ಸಿಗೆ ನೆಮ್ಮದಿಯೇ ಇಲ್ಲ. ಅದೇ ಯೋಚನೆಯಿಂದ ರಾತ್ರಿ ನಿದ್ದೆಯೂ ಬರದೇ ಅವನ ಆರೋಗ್ಯ ಕೆಡತೊಡಗಿತು. ಅವನ ಬಾಡಿದ ಮುಖ ನೋಡಿ ಚಿಕ್ಕಪ್ಪ 'ದೀಪೂ, ನಿನ್ನ ಆರೋಗ್ಯ ಸರಿ ಇಲ್ಲವೇ?' ಹಣೆ ಮುಟ್ಟಿ ನೋಡಿದರು. ನಿಜವಾಗಿ ಜ್ವರ ಇತ್ತು. ಅವನನ್ನು ರೂಮಿಗೆ ಕರೆದುಕೊಂಡು ಹೋಗಿ ಮಲಗಿಸಿ, ಪತ್ನಿಗೆ ಶುಂಠಿ ಕಷಾಯ ಮಾಡಿ ಕೊಡಲು ಹೇಳಿ, ಹತ್ತಿರದಲ್ಲೇ ಇದ್ದ ಡಾಕ್ಟರನ್ನು ಕರೆದು ತಂದರು. ಅವರು ಬರೆದುಕೊಟ್ಟ ಔಷಧಿಯನ್ನು ತಾವೇ ಹೋಗಿ ತಂದು ಕುಡಿಸಿದರು.

'ಅದಕ್ಕೇ ಹೇಳುತ್ತಿದ್ದೆ, ಒಬ್ಬಂಟಿ ಹುಡುಗರಿಗೆ ಕೊಡಬೇಡಿ ಎಂದು. ಅವರ ಜವಾಬ್ದಾರಿ ಯಾರು ಹೇಳುತ್ತಾರೆ?' ಎಂದು ದಿನವಿಡೀ ಗೊಣಗುತ್ತಲೇ ಚಿಕ್ಕಮ್ಮ ಅವನನ್ನು ಬಿಟ್ಟು ಕದಲದೇ ದಿನವಿಡೀ ನೋಡಿಕೊಂಡರು. ಬೆಳಿಗ್ಗೆ ಜ್ವರ ಕಡಿಮೆಯಾದ ಮೇಲೆಯೇ ತಮ್ಮ ಕೆಲಸ ನೋಡಿಕೊಳ್ಳಲು ಹೋದರು. ಅವರು ಒಳಗೆ ಹೋಗುತ್ತಲೇ ದೀಪಕ ಚಿಕ್ಕಪ್ಪನಿಗೆ 'ಚಿಕ್ಕಪ್ಪ, ನಿಮ್ಮಲ್ಲಿ ನನ್ನದೊಂದು ಬೇಡಿಕೆ' ಎಂದ. 'ಹೇಳು ಮಗು.' 'ನೀವು ಬೀರುವಿನಲ್ಲಿಟ್ಟಿದ್ದ ದುಡ್ಡನ್ನು ತೆಗೆದು ಬೇರೆ ಎಲ್ಲಿಯಾದರೂ ಇಡಿ. ನನ್ನ ರೂಮು ಹೊರಗಡೆ ಇದೆ ಎಷ್ಟೋ ಸಾರಿ ನನ್ನ ಸ್ನೇಹಿತರೂ ಬರುತ್ತಿರುತ್ತಾರೆ. ಏನಾದರೂ ಹೆಚ್ಚು ಕಡಿಮೆಯಾದರೆ, ಎಂದು ನನಗೆ ರಾತ್ರಿ ನಿದ್ದೆಯೇ ಬರುವುದಿಲ್ಲ.' 'ಯಾವ ದುಡ್ಡಿನ ವಿಷಯ ಹೇಳುತ್ತಿರುವೆ ದೀಪೂ. ಅದಿನ್ನೂ ಅಲ್ಲಿಯೇ ಇದೆ ಎಂದುಕೊಂಡಿರುವೆಯಾ? ಅಯ್ಯೋ ಮಗನೆ, ರೂಪಾಯಿಗಳಿಗೂ ಕಾಲುಗಳಿರುತ್ತವೆ; ಲಕ್ಷ್ಮಿ ಚಂಚಲೆ. ಒಂದೇ ಕಡೆ ಇರುವುದಿಲ್ಲ. ನಿನ್ನ ಚಿಕ್ಕಮ್ಮನನ್ನ ಏನೆಂದು ತಿಳಿದುಕೊಂಡಿರುವೆ. ಸಿ.ಬಿ.ಐ. ಅಜ್ಜಿ ಅವಳು. ದೂರದಿಂದಲೇ ದುಡ್ಡಿನ ವಾಸನೆ ಕಂಡು ಹಿಡಿಯುತ್ತಾಳೆ. ದುಡ್ಡು ಇಷ್ಟು ದಿನ ಅಲ್ಲಿಯೇ ಇರುತ್ತದಾ?'

'ನಿಜವಾಗಿ ಚಿಕ್ಕಪ್ಪ?' ದೀಪಕ್ ನಿರಾಳವಾಗಿ ಉಸಿರಾಡಿದ.

ಎಷ್ಟೋ ದಿನಗಳ ಅನಂತರ ಅವನಿಗೆ ನಿಶ್ಚಿಂತೆಯಿಂದ ನಿದ್ದೆ ಮಾಡಲು ಸಾಧ್ಯವಾಯಿತು. ಈಗ ಎರಡು ಮೂರು ದಿನಗಳಿಂದ ಅವನಿಗೆ ಜ್ವರ ಇರಲಿಲ್ಲ. ಆದರೂ ಚಿಕ್ಕಮ್ಮ ಅವನನ್ನು ಹೋಟೆಲಿಗೆ ಊಟಕ್ಕೆ ಹೋಗಲು ಬಿಡಲಿಲ್ಲ. ಮನೆಯಲ್ಲೇ ಪಥ್ಯದಡಿಗೆ ಮಾಡಿ ಬಡಿಸಿದರು. ದೀಪಕ ಯೋಚಿಸುತ್ತಿದ್ದ. ಈ ಜನ್ಮದಲ್ಲಿ ಇವರ ಋಣ ತೀರಿಸಲು ಸಾಧ್ಯವೇ? ಇದು ಯಾವ ಜನ್ಮದ ಋಣಾನುಬಂಧವಿರಬೇಕು!

ಇದಾಗಿ ಹದಿನೈದು ದಿನಗಳಾಗಿರಬಹುದು. ಒಂದು ದಿನ ದೀಪಕ ಕಾಲೇಜಿನಿಂದ ಬಂದು ನೋಡುತ್ತಾನೆ, ಅಂಗಳದಲ್ಲಿ ಹಿತ್ತಾಳೆಯ ಪಾತ್ರೆಗಳ ರಾಶಿಯೇ ಇದೆ. ಕಲಾಯಿವಾಲಾ ಕಲಾಯಿ ಮಾಡುತ್ತಿದ್ದಾನೆ. ಚಿಕ್ಕಮ್ಮ ಏನೋ ಹೆಣೆಯುತ್ತ ಕುಳಿತುಕೊಂಡು ನೋಡಿಕೊಳ್ಳುತ್ತಿದ್ದಾರೆ. ಚಿಕ್ಕಪ್ಪ ಪೇಪರ್ ಓದುತ್ತಿದ್ದಾರೆ. ಅವನು ಆಶ್ಚರ್ಯದಿಂದ ಕೇಳಿದ – 'ಇದೇನು ಚಿಕ್ಕಪ್ಪ?' 'ಇದಾ, ದೀಪಾವಳಿಯಾದ ಮೇಲೆ ದಿವಾಳಿಯಾಗುವ ಕೆಲಸ.'

'ಹಾಗಲ್ಲ ನಾನು ಕೇಳಿದ್ದು, ಏನಾದರೂ ಫಂಕ್ಷನ್ ಇದೆಯಾ ಅಂತ.'

'ಅರೆ, ನಾಳೆ ನಿನ್ನ ಚಿಕ್ಕಮ್ಮನ ಹದಿಮೂರನೇ ದಿನದಂದು ನೂರಾರು ಬ್ರಾಹ್ಮಣರಿಗೆ ಊಟ